**ಸಿ.ಸಿ. ನಂಃ 1027/2025**

**ಪಿ.ಡಬ್ಲ್ಯೂಃ 1**

**ದಿನಾಂಕ 06.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಆರೋಪಿ ಪರ: ಶ್ರೀ.ಎಮ್.ಎಸ್. ವಕೀಲರಿಂದಃ**

6. ನನಗೆ ಎರಡು ಜನ ಮಕ್ಕಳಿರುತ್ತಾರೆ. ನನ್ನ ಮಗಳು 9 ನೇ ತರಗತಿಯಲ್ಲಿ ಕಲಿಯುತ್ತಿದ್ದು, ನನ್ನ ಮಗ 5 ನೇ ತರಗತಿಯಲ್ಲಿ ಕಲಿಯುತ್ತಿದ್ದಾನೆ. ನನ್ನ ಮಕ್ಕಳು ಬಿ.ಜಿ.ಎಸ್ ಖಾಸಗಿ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ನನ್ನ ಇಬ್ಬರು ಮಕ್ಕಳ ವರ್ಷದ ಶಾಲೆಯ ಶುಲ್ಕವು 30,000/- ರೂಪಾಯಿವರೆಗೆ ಆಗುತ್ತದೆ. ನನಗೆ ಎರಡುವರೆ ಎಕರೆ ಕೃಷಿ ಭೂಮಿ ಇದೆ. ನನ್ನ ಸದರಿ ಜಮೀನಿನಲ್ಲಿ ನಾನು ತೆಂಗುಗಳನ್ನು ಬೆಳೆದಿದ್ದು, ಅದರೊಂದಿಗೆ ಸಣ್ಣ ಪ್ರಮಾಣದಲ್ಲಿ ರಾಗಿ, ಜೋಳ ಮತ್ತು ಅಲಸಂಧೆಯನ್ನು ಸಹ ಬೆಳೆಯುತ್ತೇನೆ.

7. ನನ್ನ ಜಮೀನಿನಲ್ಲಿ ತೆಂಗು ಬೆಳೆದ ಬಗ್ಗೆ ನಿಪಿ.6 ರಿಂದ 10 ರಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಸಹ ನನ್ನ ಜೊತೆಯಲ್ಲಿ ವಾಸವಿದ್ದಾರೆ. ನನ್ನ ತಂದೆಗೆ ಮೊದಲು ಎ.ಪಿ.ಎಲ್ ಕಾರ್ಡ್ ಇದ್ದು ಈಗ ಅವರಿಗೆ ಯಾವುದೇ ಪಡಿತರ ಚೀಟಿ ಇಲ್ಲ. ನನಗೆ ಬಿ.ಪಿ.ಎಲ್ ಪಡಿತರ ಚೀಟಿ ಇದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನಗೆ ಎಲ್ಲಾ ಮೂಲಗಳಿಂದ ಒಂದು ವರ್ಷಕ್ಕೆ 5 ಲಕ್ಷ ರೂಪಾಯಿ ಮೇಲ್ಪಟ್ಟು ಆದಾಯವಿದೆ. ನನ್ನ ಕುಟುಂಬದ ಎಲ್ಲಾ ಖರ್ಚುಗಳನ್ನು ಕಳೆದ ನಂತರ ನಾನು ಒಂದು ವರ್ಷಕ್ಕೆ ಸುಮಾರು 4 ಲಕ್ಷ ರೂಪಾಯಿ ಹಣವನ್ನು ಉಳಿತಾಯ ಮಾಡುತ್ತೇನೆ.

8. ನಾನು ಆದಾಯ ತೆರಿಗೆಯನ್ನು ಪಾವತಿಸುವುದಿಲ್ಲ. 20,000/- ಗಿಂತ ಹೆಚ್ಚಿನ ಮೊತ್ತಕ್ಕೆ ವ್ಯವಹಾರ ಮಾಡಿದರೆ ಅದನ್ನು ಕಡ್ಡಾಯವಾಗಿ ಚೆಕ್ ಮುಖಾಂತರವೇ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ನಾನು ದಿನಾಂಕ 01.04.2025 ರಂದು 7 ಲಕ್ಷ ರೂಪಾಯಿ ನನ್ನ ಬ್ಯಾಂಕ್ ಖಾತೆಯಿಂದ withdraw ಮಾಡಿರುತ್ತೇನೆ. ಸಾಕ್ಷಿಗೆ ಈಗ ನಿಪಿ.13 ರ ದಾಖಲೆಯನ್ನು ಕೊಟ್ಟು ಅದರಲ್ಲಿ ನೀವು 7 ಲಕ್ಷ ರೂಪಾಯಿ ಹಣವನ್ನು ಬ್ಯಾಂಕ್ ಖಾತೆಯಿಂದ withdraw ಮಾಡಿರುವ ಬಗ್ಗೆ ನಮೂದು ಇದೆಯೇ ಎಂದು

ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಪಿ.13 ರಲ್ಲಿ ದಿನಾಂಕ 01.04.2025 ರ ವ್ಯವಹಾರದ ನಮೂದು ಇಲ್ಲ ಎಂದು ನುಡಿದಿರುತ್ತಾರೆ.

9. ನಿಪಿ.11 ರ ಜನರಲ್ ಲೈಸೆನ್ಸ್ ನನ್ನ ತಂದೆಯಾದ ಕಾಂತರಾಜೇಗೌಡರ ಹೆಸರಿನಲ್ಲಿದ್ದು, ಅದರಿಂದ ಬರುವ ಆದಾಯವು ನನಗೆ ಬರುತ್ತದೆ. ನನ್ನ ತಂದೆಯ ಹೆಸರಿನಲ್ಲಿರುವ ನಿಪಿ.11 ರ ಲೈಸೆನ್ಸ್ ನ ವೆಬ್ರಿಜ್ಡ್ ನ್ನು ನಾನೇ ನಡೆಸುತ್ತಿದ್ದು, ಅದರ ಆದಾಯವನ್ನು ಸಹ ನಾನೇ ಪಡೆಯುತ್ತಿದ್ದೇನೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ.

10. ಆರೋಪಿಯು ವೃತ್ತಿಯಲ್ಲಿ ಶಿಕ್ಷಕರಾಗಿರುತ್ತಾರೆ ಎಂದರೆ ಸರಿ. ಆರೋಪಿಗೆ ಎಷ್ಟು ಮಾಸಿಕ ಸಂಬಳವಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಒಂದು ತಿಂಗಳಿಗೆ 70 ರಿಂದ 80 ಸಾವಿರ ರೂಪಾಯಿ ಸಂಬಳವಿರುವ ಕಾರಣ ನನ್ನಿಂದ ಸಾಲ ಪಡೆಯುವ ಯಾವುದೇ ಅಗತ್ಯ ಆರೋಪಿಗೆ ಇಲ್ಲ ಎಂದರೆ ಸರಿಯಲ್ಲ.

11. ನಾನು ಮತ್ತು ನನ್ನ ಕುಟುಂಬದವರು ಬಡ್ಡಿ ವ್ಯವಹಾರ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಈಗ 6 ತಿಂಗಳ ಹಿಂದೆ ನನ್ನ ಹೆಂಡತಿಯಾದ ನೇತ್ರಾವತಿರವರು ಆರೋಪಿಯ ಶಾಲೆಯ ಇನ್ನೊಬ್ಬ ಶಿಕ್ಷಕರಾದ ಶಿವಕುಮಾರವರೊಂದಿಗೆ ಜಮೀನಿನ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯದ ಕರಾರು ಎಷ್ಟು ಮೊತ್ತಕ್ಕೆ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ನಾನು ಮತ್ತು ನನ್ನ ಕುಟುಂಬದವರು ಬಡ್ಡಿ ವ್ಯವಹಾರ ಮಾಡುತ್ತಿದ್ದು, ಸದರಿ ಬಡ್ಡಿ ವ್ಯವಹಾರದ ಸಂಬಂಧ ನಾನು ಆರೋಪಿಯಿಂದ ಖಾಲಿ ಚೆಕ್ಕನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನಗೆ 7 ಲಕ್ಷ ರೂಪಾಯಿ ಆದಾಯ ಇಲ್ಲದಿದ್ದರು ಸಹ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು.,ಕೆ.ಆರ್.ನಗರ**